# ಶೂನ್ಯಸಂಪಾದನೆ

**ಸಿದ್ದರಾಮಯ್ಯ**

ರಾಜ್ಯ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿವೃತ್ತ ಉಪನಿರ್ದೇಶಕರಾದ ಲೇಖಕರು ಮಂಡ್ಯದ ಬೇವಕಲ್ ಗ್ರಾಮದವರು. ರಾಮಕೃಷ್ಣ-ವಿವೇಕಾನಂದ ಸಾಹಿತ್ಯದಿಂದ ಪ್ರೇರಣೆಯನ್ನು ಪಡೆದಿರುವ ಇವರು, ಶರಣಸಾಹಿತ್ಯದ ಅತಿ ಪ್ರಮುಖ ಗ್ರಂಥವನ್ನು ಓದುಗರಿಗೆ ಸರಳ ರೀತಿಯಲ್ಲಿ ಪರಿಚಯಿಸಿದ್ದಾರೆ.

'ಶೂನ್ಯಸಂಪಾದನೆ' ಎಂಬ ಹೆಸರಿನ ಗ್ರಂಥವು ಕನ್ನಡ ಇತಿಹಾಸದ ೧೨ನೇ ಶತಮಾನದಲ್ಲಿ ಉತ್ತರ ಕರ್ನಾಟಕದಲ್ಲಿ ಅಸ್ತಿತ್ವದಲ್ಲಿದ್ದ ಬಿಜ್ಜಳ ರಾಜನ ಆಡಳಿತದಲ್ಲಿ ನಡೆದ ಕೆಲವು ಮಹತ್ತರವಾದ ಘಟನೆಗಳನ್ನು ನಮಗೆ ಪರಿಚಯಿಸುತ್ತದೆ. ಆ ಕಾಲವನ್ನು ವೀರಶೈವ ಧರ್ಮದ ಪರ್ವಕಾಲವೆನ್ನಬಹುದು. ಸಮಾಜದ ಅನೇಕ ಗಣ್ಯರು ತಾವು ಹುಟ್ಟಿ ಬಂದ ಮತವನ್ನು ತ್ಯಜಿಸಿ ತಮಗೆ ಮೆಚ್ಚುಗೆಯಾದ ವೀರಶೈವ ಧರ್ಮವನ್ನು ಅಪ್ಪಿಕೊಂಡ ಕಾಲ. ಉತ್ತಮ ವಿಚಾರ, ಆಚಾರಗಳನ್ನು ತಮ್ಮ ದಿನಚರಿಯಲ್ಲಿ ಅಳವಡಿಸಿಕೊಂಡ ಈ ಪುರುಷೋತ್ತಮರು ಸಮಾಜದಲ್ಲಿ ಒಂದು ಹೊಸ ಕ್ರಾಂತಿಯನ್ನುಂಟುಮಾಡಿ ಅದು **'ಕಲ್ಯಾಣದ ಕ್ರಾಂತಿ'** ಎಂದೇ ಹೆಸರಾಯಿತು. ಈ ಕ್ರಾಂತಿಯಲ್ಲಿ ಭಾಗವಹಿಸಿದ ಶರಣ ಶರಣೆಯರ ಗುಣಲಕ್ಷಣಗಳನ್ನು ಇಂದಿನ ಮಹಾದಾರ್ಶನಿಕರಾದ ಶ್ರೀ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಈ ಮುಂದಿನಂತೆ ವರ್ಣಿಸುತ್ತಾರೆ: "ಅವರು ನಿಜವನರಿದ ಮಹಂತರು. ಅವರ ನಡೆ ನುಡಿ ನೆನಹುಗಳು ಪರುಷ. ನೆಲದಿಂದ ನಿಶ್ಶೂನ್ಯದವರೆಗೆ ಹರಹಿದ ಮನಸ್ಸು ಅವರದು. ಹೃದಯದಲ್ಲಿ ಭಕ್ತಿರಸಾಬ್ಧಿ, ನೋಟದಲ್ಲಿ ಕಾರುಣ್ಯದ ಕಳೆ, ಕರುಳಿಲ್ಲದ ಅನುರಾಗ, ಮೇರೆ ಇಲ್ಲದ ಲೋಕಹಿತಭಾವ. ಅವರು ಶ್ರದ್ಧೆಯ ಅಶ್ವವನ್ನೇರಿ ನಿಷ್ಠೆ ಅವಧಾನ ಅನುಭವ ಆನಂದ ಪಥವಿಡಿದು ಶಿವಸಾಮರಸ್ಯ ಹೊಂದಿದ ಮಹಾಯೋಗಿಗಳು, ಜ್ಞಾನಾನ್ನ ಪ್ರಸಾದಿಗಳು, ಪರಮಸತ್ಯವ ಕಂಡು ಶಬ್ದಮುಗ್ಧರಾದ ಅನುಭಾವಿಗಳು. ಬೆಳಗಿನ ಬೆಳಗು ಮಹಾಬೆಳಗ ವೀಕ್ಷಿಸಿದ ತತ್ವದರ್ಶಿಗಳು. ಅವರ ವಿನಿರ್ಮಲಾಂತಃಕರಣದಿಂದ ಮೂಡಿಬಂದ ನುಡಿಗಳೇ ಸುವಚನಗಳು." ಇಂತಹ ಶರಣಶರಣೆಯರ ವಚನಗಳನ್ನೊಳಗೊಂಡ ಒಂದು ಸಂಕಲನ ಗ್ರಂಥವೇ ಕನ್ನಡ ಸಾಹಿತ್ಯದ ಪ್ರಸಿದ್ಧ ಕೃತಿ **'ಶೂನ್ಯಸಂಪಾದನೆ'**.

ಈ ಗ್ರಂಥವನ್ನು ಸಂಪಾದಿಸಿದವರು ಐದು ಮಂದಿ. ಇವರಲ್ಲಿ ಶಿವಗಣಪ್ರಸಾದಿ ಮಹಾದೇವಯ್ಯನೇ ಮೊದಲಿಗ. ಅವನ ನಂತರ ಹಲಗೆದೇವ, ಗುಮ್ಮಳಾಪುರದ ಸಿದ್ಧಲಿಂಗ ಮತ್ತು ಕೆಂಚವೀರಣ್ಣೊಡೆಯ—ಈ ಮೂವರು ಪರಿಷ್ಕರಿಸಿ ಹೊಸದಾಗಿ ಕೆಲವು ಪ್ರಸಂಗಗಳನ್ನು ಸೇರಿಸಿದರು. ಅಂತಿಮವಾಗಿ ಗೂಳೂರು ಸಿದ್ಧವೀರರು ಇದಕ್ಕೆ ಮತ್ತಷ್ಟು ಪ್ರಸಂಗಗಳನ್ನು ಸೇರಿಸಿ ತಮ್ಮ ಶ್ರದ್ಧಾ ಭಕ್ತಿ ಪ್ರತಿಭೆ ಪಾಂಡಿತ್ಯಗಳಿಂದ ಪೂರ್ಣಗೊಳಿಸಿ ಈ ಗ್ರಂಥ ಅಧ್ಯಾತ್ಮ ಪ್ರಪಂಚದ ಒಂದು ಶ್ರೇಷ್ಠ ಗ್ರಂಥವೆಂದು ಕರೆಸಿಕೊಳ್ಳುವುದಕ್ಕೆ ಕಾರಣರಾದರು. ಎಡೆಯೂರು ಸಿದ್ಧಲಿಂಗೇಶ್ವರರ ಗುರು ಪರಂಪರೆಗೆ ಸೇರಿದ ಈ ಗೂಳೂರು ಸಿದ್ಧವೀರ ಯತಿಯು ತಮ್ಮ ಈ ಸಂಪಾದನಾ ಗ್ರಂಥದ ಮುನ್ನುಡಿಯಲ್ಲಿ ಗ್ರಂಥದ ಬಗೆಗೆ ಈ ಮುಂದಿನಂತೆ ಕೊಂಡಾಡಿದ್ದಾರೆ— "ಇದು ದಿವ್ಯ ವೇದಾಂತ ಶಿರೋಮಣಿ. ಇದು ಸಮಸ್ತ ಶಾಸ್ತ್ರ ಮುಖ್ಯ ಮುಖ ದರ್ಪಣ. ಇದು ಸರ್ವಾಚಾರ ಸಂಪನ್ನ ಸಮಾರೂಢ ಸಂಗ್ರಹ. ಇದು ಪರಮಗುರು ಪರಮ ವೀರಶೈವ ಸಿದ್ಧಾಂತ ತತ್ವಜ್ಞಾನ. ಇದು ಸತ್ ಚಿತ್ ಆನಂದ ನಿತ್ಯಪರಿಪೂರ್ಣ ರಸಾಮೃತಪ್ರಸನ್ನ ಪ್ರಸಾದ—ಇನ್ನೂ ಮುಂತಾದ ಶ್ರೇಷ್ಠ ಗುಣಗಳನ್ನು ಹೊಂದಿದೆ." ಈ ಗ್ರಂಥವನ್ನು ಪ್ರಸಿದ್ಧ ಕನ್ನಡ ಸಾಹಿತಿ ಡಾ. ಎಲ್. ಬಸವರಾಜು ಅವರು ೧೯೬೭ರಲ್ಲಿ ಗದ್ಯರೂಪದಲ್ಲಿ ಬರೆದು 'ಸರಳ ಶೂನ್ಯಸಂಪಾದನೆ' ಎಂದು ಹೆಸರಿಸಿ ಸಾಹಿತ್ಯ ಸರಸ್ವತಿಗೆ ಅರ್ಪಿಸಿದ್ದಾರೆ. ಈ ಕೆಲಸದಲ್ಲಿ ಅವರ ಶ್ರದ್ಧೆ, ಕಳಕಳಿ, ನಿಷ್ಠೆ, ಪಾಂಡಿತ್ಯ ವರ್ಣಿಸಲಸದಳ. ಈ ಕೃತಿ ಕನ್ನಡಿಗರ ಮನದಲ್ಲಿ ಚಿರಕಾಲ ಉಳಿಯುವಂತಹುದು.

ಇನ್ನು ಈ ಗ್ರಂಥದಲ್ಲಿರುವ ಹೂರಣವೇನೆಂದರೆ ಮಾನವ ಜನ್ಮದ ಗುರಿ ಭಗವಂತನ ಸಾಕ್ಷಾತ್ಕಾರವೆಂಬುದು. ದೇವರ ಸೃಷ್ಟಿಯಲ್ಲಿ ಮಾನವರು ಬಹಳ ಶ್ರೇಷ್ಠ. ಈ ಪ್ರಪಂಚದಲ್ಲಿ ಗಿಡ ಮರ ಬಳ್ಳಿ ಪಶು ಪಕ್ಷಿ ಪ್ರಾಣಿಗಳು ಹುಟ್ಟಿ ಸಾಯುತ್ತವೆ. ಆದರೆ ಮನುಷ್ಯ ಈ ವರ್ಗಕ್ಕೆ ಸೇರಿದವನಲ್ಲ. ಜನ್ಮ ತಾಳಿ ಬಂದ ಮಾನವರೆಲ್ಲ ಅಂತ್ಯದಲ್ಲಿ ಮಾನವರಾಗಿ ಸಾಯದೆ ಮಾಧವರಾಗಬೇಕು, ನರನು ಹರನಾಗಬೇಕು, ಅಂಗ ಲಿಂಗವಾಗಬೇಕು ಜೀವಾತ್ಮ ಪರಮಾತ್ಮನಾಗಬೇಕು. ಈ ಪರಿವರ್ತನೆ ಆಗಬೇಕಾದರೆ ಜೀವನದಲ್ಲಿ ಮನುಷ್ಯರು ಮಾಡಬೇಕಾದ ಕೆಲಸಗಳೇನು? ಅನುಸರಿಸಬೇಕಾದ ನೀತಿನಿಯಮಾವಳಿಗಳು ಯಾವುವು? ಮನುಷ್ಯರ ದಿನನಿತ್ಯದ ವರ್ತನೆ ಹೇಗಿರಬೇಕು? ಯಾವ ಕೆಲಸಗಳು ಭಗವಂತನಿಗೆ ಮೆಚ್ಚುಗೆ, ಶಿವನಿಗೆ ಮೆಚ್ಚುಗೆಯಾಗದ ಕೆಲಸಗಳಾವುವು ಎಂಬ ಸಾಮಾಜಿಕ, ಆರ್ಥಿಕ,

ನೈತಿಕ ವಿಚಾರಗಳನ್ನು ನಿರ್ಧರಿಸಲು ಸ್ತ್ರೀಪುರುಷರು ಅಥವಾ ಶರಣಶರಣೆಯರು ಸತ್ಸಂಗದ ಸಭೆಗಳನ್ನು ನಡೆಸುತ್ತಿದ್ದರು. ಆ ಸಭೆಗಳಲ್ಲಿ ಮೇಲಿನ ವಿಷಯಗಳನ್ನು ಮಂಡಿಸಿ ಚರ್ಚೆಗೆ ಅನುವು ಮಾಡಿಕೊಟ್ಟು ವಾದ-ಪ್ರತಿವಾದ, ಚಿಂತನ-ಮಂಥನಗಳಾದ ನಂತರ ಸಮಾಜದ ಸರ್ವರಿಗೂ ಒಪ್ಪಿಗೆಯಾಗುವಂತಹ ನಡಾವಳಿಗಳನ್ನು ಅಂಗೀಕರಿಸಿ ಆ ಕ್ರಿಯಾಸಂಹಿತೆಯನ್ನು ತಮ್ಮ ದಿನಚರಿಯಲ್ಲಿ ಆಚರಣೆಗೆ ತರುತ್ತಿದ್ದರು. ಉದಾಹರಣೆಗೆ ಒಂದನ್ನು ತಿಳಿಸುವುದಾದರೆ **"ಕೈಯಲ್ಲಿಲ್ಲದವನು ಕಳ್ಳ, ಹೊಟ್ಟೆಗಿಲ್ಲದವನು ಬಡವ"** ಅಂದಿನ ನಾಡುನುಡಿಯನ್ನು ಅಳಿಸಿ ಅದರ ಬದಲಿಗೆ ಕಾಯಕ ಮಾಡದವನು ಕಳ್ಳ, (ದೇವರಲ್ಲಿ) ಭಕ್ತಿ ಇಲ್ಲದವನು ಬಡವ ಎಂಬುದನ್ನು ಸ್ವೀಕರಿಸಿದ್ದರು. ಇಂಥಹ ಶ್ರೇಷ್ಠ ಕ್ರಿಯಾಸಂಹಿತೆಯನ್ನು ಆಚರಣೆಯಲ್ಲಿ ತಂದು ಬಾಳಿ ಬದುಕಿ ತಮ್ಮ ಅಂತ್ಯದಲ್ಲಿ ಶಿವಸಾಕ್ಷಾತ್ಕಾರ ಪಡೆಯುತ್ತಿದ್ದರು.

ಈ ಗ್ರಂಥದ ಬಗ್ಗೆ ಅನೇಕ ಕವಿಗಳು ವಿಮರ್ಶೆ ಪರಾಮರ್ಶೆಗಳನ್ನು ಬರೆದಿರುತ್ತಾರೆ. ಆದರೆ ನನ್ನ ಅಭಿಪ್ರಾಯದಲ್ಲಿ ಇದು ವಿಮರ್ಶೆಗೆ ನಿಲುಕುವ ಗ್ರಂಥವಲ್ಲ. ಚಂದ್ರ ಸೂರ್ಯರಿಗೆ ಮತ್ತೊಂದು ಹೋಲಿಕೆಯಿಲ್ಲ, ಆಕಾಶಕ್ಕೆ ಏಣಿಯಿಲ್ಲ, ಶೂನ್ಯಸಂಪಾದನೆಗೆ ಹೋಲಿಕೆಯಿಲ್ಲ ಎನ್ನಬಹುದು. ಈ ಗ್ರಂಥ ವೀರಶೈವ ಸಿದ್ಧಾಂತವನ್ನು ತಿಳಿಸುವ ಭಗವದ್ಗೀತೆಯಾದರೂ ಇದು ವೀರಶೈವ ಧರ್ಮದ ಅನುಯಾಯಿಗಳಿಗೆ ಮಾತ್ರ ಮೀಸಲಾಗಿಲ್ಲ. ಇಲ್ಲಿ ಕಂಡುಬರುವ ಬ್ರಹ್ಮ ಜಿಜ್ಞಾಸೆ, ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗಗಳು ವೇದಾಂತದ ಎಲ್ಲಾ ಮುಖಗಳನ್ನೂ ಓದುಗರಿಗೆ ತಿಳಿಸುತ್ತದೆ. ಆದರೆ ಇದರಲ್ಲಿರುವ ಸೂಕ್ಷ್ಮಾತಿಸೂಕ್ಷ್ಮ ವಿಚಾರಗಳನ್ನು ತಿಳಿದುಕೊಳ್ಳಬೇಕಾದರೆ ಓದುವ ವ್ಯಕ್ತಿ ಉತ್ತಮ ಸಂಸ್ಕಾರವಂತನಾಗಿದ್ದು ಯೋಗಸಾಧನೆಯಲ್ಲಿ ಹೆಚ್ಚಿನ ಪರಿಣತಿಯನ್ನು ಹೊಂದಿರಬೇಕಾಗುತ್ತದೆ.

ವಚನಗಳೆಂಬ ಬಿಡಿಹೂವುಗಳನ್ನು ಬಿಡಿಸಿ ತಂದು **'ಶೂನ್ಯಸಂಪಾದನೆ'** ಎಂಬ ಹೂಮಾಲೆಯನ್ನು ತಯಾರಿಸಿ ಶಿವನ ಕೊರಳಿಗೆ ಅರ್ಪಿಸಿದ ಈ ಗ್ರಂಥ ಸಂಪಾದನಾಕಾರರಿಗೆ ಚಾಮರಸ ಕವಿಯ **'ಪ್ರಭುಲಿಂಗಲೀಲೆ'** ಮತ್ತು **'ಸಿಂಗಿರಾಜ ಪುರಾಣ'** ಎಂಬ ಗ್ರಂಥಗಳು ಸ್ಫೂರ್ತಿಯನ್ನೊದಗಿಸಿವೆ ಎಂಬುದು ನಮ್ಮ ಹಿಂದಿನ ಕವಿಗಳ ಅಭಿಮತ. ಈ ಗ್ರಂಥದ ಕಥಾನಾಯಕರಲ್ಲಿ ಮುಂಚೂಣಿಯಲ್ಲಿದ್ದವರು ಬಸವಣ್ಣ, ಪ್ರಭುದೇವರು, ಚೆನ್ನ ಬಸವಣ್ಣ, ಮಡಿವಾಳ ಮಾಚಿತಂದೆ, ಸೊನ್ನಲಾಪುರದ ಸಿದ್ಧರಾಮದೇವರು, ಅಕ್ಕಮಹಾದೇವಿ, ಮೋಳಿಗೆ ಮಾರಯ್ಯ, ನುಲಿಯ ಚಂದಯ್ಯ, ಹಡಪದ ಅಪ್ಪಣ್ಣ, ಲಕ್ಕಮ್ಮ, ಆಯ್ದಕ್ಕಿ ಮಾರಯ್ಯ, ಘಟ್ಟಿವಾಳಯ್ಯ, ಮುಕ್ತಾಯಕ್ಕ, ಡೋಹರ ಕಕ್ಕಯ್ಯ ಇನ್ನೂ ಮುಂತಾದ ಅಸಂಖ್ಯಾತರು. ಇವರೆಲ್ಲಾ ಗುರುವಿನಿಂದ ಲಿಂಗದೀಕ್ಷೆಯ ಸಂಸ್ಕಾರ ಪಡೆದು ವೀರಶೈವ ಧರ್ಮವನ್ನು ಅಪ್ಪಿಕೊಂಡಿದ್ದವರು.

ಅವರ ಲಿಂಗಾಂಗ ಸಾಮರಸ್ಯದ ಸಾರ ಈ ರೀತಿಯಿದೆ. **ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ** ಮತ್ತು ಐಕ್ಯ ಎಂಬ ಈ ಆರು ಅಂಗಗಳು **ಶ್ರದ್ಧಾಭಕ್ತಿ, ನಿಷ್ಠಾಭಕ್ತಿ, ಅವಧಾನಭಕ್ತಿ, ಅನುಭವಭಕ್ತಿ, ಆನಂದಭಕ್ತಿ** ಮತ್ತು ಸಮರಸ **ಭಕ್ತಿ**ಗಳೆಂಬ ಆರು ಭಕ್ತಿಗಳೊಡನೆ ಕೂಡಬೇಕು. **ನಿವೃತ್ತಿ ಕಲೆ, ಪ್ರತಿಷ್ಠಾ ಕಲೆ, ವಿದ್ಯಾ ಕಲೆ, ಶಾಂತಿ ಕಲೆ, ಶಾಂತ್ಯತೀತ ಕಲೆ** ಮತ್ತು **ಶಾಂತ್ಯತೀತೋತ್ತರ ಕಲೆ**ಗಳೆಂಬುವು ಆರು ಷಟ್ಕಗಳು. ಇವುಗಳಿಂದ ಕೂಡಿದ **ಆಚಾರಲಿಂಗ, ಗುರು ಲಿಂಗ, ಶಿವ ಲಿಂಗ, ಜಂಗಮಲಿಂಗ, ಪ್ರಸಾದಿಲಿಂಗ** ಮತ್ತು **ಮಹಾಲಿಂಗ**ಗಳೆಂಬುವು ಈ ಆರು ಲಿಂಗಗಳು. ಇವನ್ನು **ಚಿತ್ತ, ಬುದ್ಧಿ, ಮನಸ್ಸು, ಅಹಂಕಾರ, ಜ್ಞಾನ, ಭಾವ**ಗಳೆಂಬ ಆರು ಹಸ್ತಗಳಿಂದ ಪೂಜಿಸಬೇಕು. **ಗಂಧ**, ರಸ, **ರೂಪು, ಸ್ಪರ್ಶ, ಶಬ್ದ** ಮತ್ತು **ಪರಿಣಾಮ**ಗಳೆಂಬ ಆರು ಪದಾರ್ಥಗಳನ್ನು ಆ ಆರು ಲಿಂಗಗಳಿಗೆ ಸಮರ್ಪಿಸಬೇಕು. ಅವುಗಳ ಪ್ರಸಾದವನ್ನು **ಘ್ರಾಣ, ಜಿಹ್ವೆ, ನೇತ್ರ, ತ್ವಕ್ಕು, ಶ್ರೋತ್ರ** ಮತ್ತು **ಹೃದಯ**ಗಳೆಂಬ ಆರು ಮುಖಗಳಿಂದ ತಾನು ಸ್ವೀಕರಿಸಬೇಕು. ಹೀಗೆ ಸಾಧನೆ ಮಾಡಿದರೆ **ಭಕ್ತಿ, ಕರ್ಮಕ್ಷಯ, ನಿರ್ಮಲಮತಿ, ವಿಚಾರ, ದರ್ಪ ಸಂಕ್ಷಯ ಸಮ್ಯಕ್‌ಜ್ಞಾನ**ಗಳೆಂಬ ಆರು ಸಿದ್ಧಿಗಳನ್ನು ಹೊಂದಬಹುದು. ಅನಂತರ **ಪೃಥ್ವಿ, ಅಪ್ಪು**, ವಾಯು, **ಆಕಾಶ, ಆತ್ಮ**ಗಳೆಂಬ ತತ್ವಗಳನ್ನು ಮೀರಿ ಮೂವತ್ತಾರನೆಯ ತತ್ವವಾದ ಆ **ಶಿವತತ್ವ**ದಲ್ಲಿ ಬೆರೆಯಬಹುದು. ಇದೇ ಲಿಂಗಾಂಗ ಸಾಮರಸ್ಯವು.

ಒಟ್ಟಿನಲ್ಲಿ ಈ ಗ್ರಂಥ ವೀರಶೈವರಿಗೆ ಪವಿತ್ರ ಗ್ರಂಥವಾಗಿದ್ದು ಆದರೆ ಕನ್ನಡ ಬಲ್ಲವರಿಗೆ ಅವರ ಪೂರ್ವಜರು ಸಂಪಾದಿಸಿಟ್ಟಿರುವ ಅಮೂಲ್ಯ ಆಸ್ತಿಯಾಗಿದೆ. ಕಲ್ಲುಸಕ್ಕರೆ ರುಚಿಯ ತಿಂದವನೇ ಬಲ್ಲ; ಶೂನ್ಯ ಸಂಪಾದನೆ ರುಚಿಯ ಓದಿದವನೇ ಬಲ್ಲ. ✪

**ಉರಿಯೊಳಗಣ ಕರ್ಪುರಕ್ಕೆ ಕರಿಯುಂಟೆ ಅಯ್ಯ?**
**ಬಯಲ ಮರೀಚಿಕೆಯ ಜಲಕ್ಕೆ ಕೆಸರುಂಟೆ?**
**ವಾಯುವನಪ್ಪಿದ ಪರಿಮಳಕ್ಕೆ ನಿರ್ಮಾಲ್ಯ ಉಂಟೆ?**
**ನೀವು ನೆರೆ ಒಲಿದ ಬಳಿಕ ಎನಗೆ ಭವ ಉಂಟೆ?**
**ಕೂಡಲ ಸಂಗಮದೇವ, ನಿಮ್ಮ ಚರಣಕಮಲದೊಳಗೆ**
**ಎನ್ನನಿಂಬಿಟ್ಟುಕೊಳ್ಳಯ್ಯ.**

**-ಶ್ರೀಬಸವಣ್ಣ** (ಶೂನ್ಯಸಂಪಾದನೆ ೨೧-೪೬)